ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 128
2. ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
3. ಉತ್ತರಿಸಬೇಕಾದ ದಿನಾಂಕ : 16.07.2019
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ಉತ್ತರ ಕರ್ನಾಟಕದ ಜನ ಸಾಮಾನ್ಯರ ಮತ್ತು ಜಾನುವಾರುಗಳ ಹಿತದೃಷ್ಟಿಯಿಂದ ಕಾಳ-ಘಟಪ್ರಭಾ-ಮಲಪ್ರಭಾ ನದಿಗಳನ್ನು ಜೋಡಣೆ ಮಾಡಬೇಕೆನ್ನುವ ಆ ಭಾಗದ ಜನರ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ನದಿ ಜೋಡಣೆಯ ಪ್ರಸ್ತಾವನೆಯ ಸಾಧಕ-ಬಾಧಕಗಳು, ಕಾಳ ಕಣಿವೆಯಲ್ಲಿನ ನೀರಿನ ಲಭ್ಯತೆಯ ಬಗ್ಗೆ ಮಹದಾಯಿ ನ್ಯಾಯಾಧಿಕರಣದ ಮುಂದೆ ರಾಜ್ಯವು ಪ್ರತಿಪಾದಿಸಿರುವ ನಿಲುವುಗಳು, ಕೃಷ್ಣಾ ಕಣಿವೆಗೆ ಇತರೆ ಕಣಿವೆಗಳ ನೀರನ್ನು ತಿರುವು ಮಾಡಿ ಅಧಿಕಗೊಳಿಸುವುದರಿಂದ ಆಗುವ ಅಂತರ ರಾಜ್ಯ ಪರಿಣಾಮಗಳ ಬಗ್ಗೆ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ಜಲ ವಿವಾದ ನ್ಯಾಯಾಧಿಕರಣ-Iರ ವರದಿಯ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು.
ಆ	ಇಲ್ಲವಾದಲ್ಲಿ, ಉತ್ತರ ಕರ್ನಾಟಕ ಭಾಗದ ಜನರ ಜೀವನಾಧಾರವಾಗುವ ಸದರಿ ಕಾಳ-ಘಟಪ್ರಭಾ-ಮಲಪ್ರಭಾ ನದಿಗಳ ಜೋಡನೆಯ ಯೋಜನೆಯನ್ನು ಇನ್ನಾದರೂ ಕೈಗೊಳ್ಳಲು ಸರ್ಕಾರ ಮುಂದಾಗುವುದೇ;	
ಇ	ಕೃಷಿ ಮತ್ತು ಕುಡಿಯುವ ನೀರಿಗೆ ಬಳಕೆಯಾಗದೇ ಅರಣ್ಯ ಪ್ರದೇಶದಲ್ಲಿ ಕಾಳ ನದಿಯು ವ್ಯರ್ಥವಾಗಿ ಹರಿದು ಸಮುದ್ರ ಸೇರುತ್ತಿರುವುದರಿಂದ ಸುಮಾರು 170 ಟಿ.ಎಂ.ಸಿ. ಪ್ರಮಾಣದ ನೀರು ಉಪಯೋಗವಾಗದಿರುವುದನ್ನು ಸರ್ಕಾರ ಗಮನಿಸಿದೆಯೇ;	
ಈ	ಸದರಿ ಕಾಳ-ಘಟಪ್ರಭಾ-ಮಲಪ್ರಭಾ ನದಿಗಳ ಜೋಡಣೆಯಿಂದ ಏತ-ನೀರಾವರಿ ಮೂಲಕ ಕನಿಷ್ಠ 25 ಟಿ.ಎಂ.ಸಿ. ನೀರನ್ನಾದರೂ ಕುಡಿಯುವುದಕ್ಕಾಗಿ ಉಪಯೋಗಿಸಲು ಉತ್ತರ ಕರ್ನಾಟಕದ ಜಿಲ್ಲೆಗಳ (ಧಾರವಾಡ, ಗದಗ, ಬಾಗಲಕೋಟೆ ಮತ್ತು ಬೆಳಗಾವಿ) ಜನರಿಗೆ ಒದಗಿಸಲು ಸರ್ಕಾರ ಇನ್ನಾದರೂ ಅಗತ್ಯ ಕ್ರಮ ಕೈಗೊಳ್ಳುವುದೇ?	

ಸಂಖ್ಯೆ: ಜಸಂಇ 7 ಕೃವಿಇ 2019

(ಡಿ.ಕೆ.ಶಿವಕುಮಾರ)
ಜಲ ಸಂಪನ್ಮೂಲ ಸಚಿವರು